# ಉಪನಿರ್ದೇಶಕರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಸಂಖ್ಯೆ:-ಜಿ2/ಮಾನ/184/2018-19 10,009 5/1/19 ದಿನಾಂಕ:-04.01.2019

**ನಮೂನೆ-2 {ನಿಯಮ 11(4)}**

**ವಿಷಯ:- ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ-2009 ಹಾಗೂ ನಿಯಮಗಳು-2012ರ ಉಪನಿಯಮ 18 ರಡಿಯಲ್ಲಿ ಅನುದಾನರಹಿತ ಶಾಲೆಗೆ ಮಾನ್ಯತೆ ನೀಡುವ ಕುರಿತು,**

**ಉಲ್ಲೇಖ:- ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿವಮೊಗ್ಗ ಇವರ ಪತ್ರ ಸಂಖ್ಯೆ ಎ2 ಮಾ ನ 155/18-19 ದಿನಾಂಕ;- 26.12.2018**

&&&&&&&&&&&

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯಿದೆ-2009 ಹಾಗೂ ನಿಯಮಗಳು -2012ರ ಉಪನಿಯಮ 18 ರಡಿಯಲ್ಲಿ ಶಾಲೆಗೆ ಈ ಕೆಳಕಂಡ ಷರತ್ತಿಗೊಳಪಟ್ಟು **ತಾತ್ಕಾಲಿಕವಾಗಿ ಶಾಶ್ವತ ಅನುದಾನರಹಿತವಾಗಿ** ಮಾನ್ಯತೆ ನವೀಕರಿಸಿದೆ.

| ಶಾಲೆಯ ಹೆಸರು ಮತ್ತು ವಿಳಾಸ | ಶಾಲೆಯ ಆಡಳಿತ ಮಂಡಳಿ ಹೆಸರು ಮತ್ತು ವಿಳಾಸ | ತರಗತಿ | ವಿಭಾಗ | ಮಾಧ್ಯಮ | ಮಾನ್ಯತೆ ನವೀಕರಣ ನೀಡಿರುವ ಅವಧಿ |
|---|---|---|---|---|---|
| **ಜ್ಞಾನಸಾಗರ ಸೆಂಟ್ರಲ್ ಸ್ಕೂಲ್, ಕೊಮ್ಮನಾಳು, ಶಿವಮೊಗ್ಗ ತಾ, ಶಿವಮೊಗ್ಗ ತಾ {ಸಿ ಬಿ ಎಸ್ ಇ}** | ಜ್ಞಾನಸಾಗರ ಎಜುಕೇಷನ್ ಟ್ರಸ್ಟ್ {ರಿ}, ಕೊಮ್ಮನಾಳು, ಶಿವಮೊಗ್ಗ ತಾ, | 1 ರಿಂದ 7 ತರಗತಿ | 1 | ಆಂಗ್ಲ | **2017-18 ರಿಂದ 2018-19 ನೇ ಸಾಲಿಗೆ ಸಿಬ್ಬಂದಿಗೆ ಸೇವಾಭದ್ರತೆಯಡಿ ಕನಿಷ್ಠ ವೇತನ ನೀಡುವ ಷರತ್ತಿಗೊಳಪಟ್ಟು ಶಾಶ್ವತ ಅನುದಾನರಹಿತವಾಗಿ ಷರತ್ತು ವಿಧಿಸಿ ಪ್ರಥಮ ಮಾನ್ಯತೆ ನೀಡಿದೆ.** |

**ಷರತ್ತುಗಳು:-**

1. ಆರ್ ಟಿ ಇ ನಿಯಮದನ್ವಯ ಸದರಿ ಮಾನ್ಯತೆ ನವೀಕಣವು ತಾತ್ಕಾಲಿಕವಾಗಿರುತ್ತದೆ.
2. 2009ರ ಆರ್ ಟಿ ಇ ಕಾಯಿದೆ 2012ರ ನಿಯಮದಂತೆ ಅನ್ವಯಿಕ ಶಾಲೆಗಳು ಬದ್ದವಾಗಿರಲು ಅವಕಾಶವಿದೆ
3. ಶಾಲೆಯಲ್ಲಿ 1ನೇ ತರಗತಿ ದಾಖಲಾತಿಗೆ ಅವಕಾಶ ಕಲ್ಪಸಿ ದುರ್ಬಲವರ್ಗದ, ಅವಕಾಶವಂಚಿತ ಅರ್ಹ ವಿದ್ಯಾರ್ಥಿಗಳಿಗೆ ಶೇಕಡ 25 ಮೀರದಂತೆ 1 ರಿಂದ 8ನೇ ತರಗತಿವರೆಗೆ ಪ್ರಾಥಮಿಕ ಶಿಕ್ಷಣ ಒದಗಿಸುವಲ್ಲಿ ಬದ್ದರಾಗಿರತಕ್ಕದ್ದು. ಸದರಿ ಶಾಲೆಯು ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಹೊಂದಿದ್ದರೆ ಮೇಲಿನ ಅಂಶಗಳನ್ನೇ ಅನುಸರಿಸುವುದು. ಈ ವಿದ್ಯಾರ್ಥಿಗಳಿಗೆ ಯಾವುದೇ ತಾರತಮ್ಯ ಮಾಡುವಂತಿಲ್ಲ
4. 3ನೇ ಪ್ಯಾರದಲ್ಲಿ ಸೂಚಿಸಿರುವಂತೆ ಶಾಲೆಗಳು 12(2)ರನ್ವಯ ಶುಲ್ಕ ಮರು ಪಾವತಿಗೆ ಒಳಪಡುತ್ತವೆ. ಶಾಲೆಗಳು ಇದಕ್ಕೆ ಸಂಬಂಧಿಸಿದಂತೆ ಪ್ರತ್ಯೇಕ ಬ್ಯಾಂಕ್ ಖಾತೆ ತೆರೆದು ಇಲಾಖೆ ನಡೆಸುವ ತಪಾಸಣೆಗೆ ಒಳಪಡಿಸುವುದು ಕಡ್ಡಾಯವಾಗಿರುತ್ತದೆ.
5. ದಾಖಲಾತಿ ಸಮಯದಲ್ಲಾಗಲೀ / ಶೈಕ್ಷಣಿಕ ವರ್ಷದಲ್ಲಾಗಲೀ ;ಯಾವುದೇ ರೀತಿಯ ವಂತಿಕೆಯನ್ನು ಪೋಷಕರಿಂದ ಕಡ್ಡಾಯವಾಗಿ ಪಡೆಯುವಂತಿಲ್ಲ. ಮಾನ್ಯತೆ ನವೀಕರಣ ಪಡೆಯುವ ಸಂದರ್ಭದಲ್ಲಿ ಮಕ್ಕಳಿಂದ ಪಡೆಯುವ ಶುಲ್ಕದ ವಿವರವನ್ನು ಸಲ್ಲಿಸಿ ಅನುಮೋದನೆಯನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ. ಈ ರೀತಿ ಅನುಮೋದನೆ ಪಡೆದ ಶುಲ್ಕಗಳ ವಿವರಗಳನ್ನು ಶಾಲೆಯ ಸೂಚನಾ ಫಲಕದಲ್ಲಿ ಕಡ್ಡಾಯವಾಗಿ ಪ್ರಕಟಿಸುವುದು.
6. ಶಾಲೆಗಳು ಇದಕ್ಕೆ ಸಂಬಂಧಿಸಿದಂತೆ ಶೈಕ್ಷಣಿಕ ಗುಣಮಟ್ಟ ಪರಿಗಣಿಸಿ ವಿದ್ಯಾರ್ಥಿಗಳನ್ನಾಗಲೀ , ಪೋಷಕರನ್ನಾಗಲೀ ಸಂದರ್ಶನಕ್ಕೆ ಒಳಪಡಿಸುವಂತಿಲ್ಲ
7. ಇಲಾಖೆ ನಿಗದಿಪಡಿಸಿದ ಕಾಲಮಿತಿಯೊಳಗೆ ಪ್ರವೇಶಾತಿ ಕಲ್ಪಿಸತಕ್ಕದ್ದು.
8. ಜನ್ಮ ದಿನಾಂಕ, ಧರ್ಮ, ಜಾತಿ, ಜನಾಂಗ, ಹುಟ್ಟಿದ ಸ್ಥಳದ ಆದಾರದ ಮೇಲೆ ಶಾಲೆಗೆ ವಿದ್ಯಾರ್ಥಿಗಳ ದಾಖಲಾತಿಯನ್ನು ನಿರಾಕರಿಸುವಂತಿಲ್ಲ..
9. ಶಾಲೆಗಳು ಈ ಕೆಳಕಂಡ ಷರತ್ತುಗಳನ್ನು ಪಾಲಿಸುವುದು.
   (i) ಪ್ರವೇಶಾತಿ ಪಡದ ವಿದ್ಯಾರ್ಥಿಯನ್ನು ತರಗತಿಯಿಂದಾಗಲೀ, ಶಾಲೆಯಿಂದಾಗಲೀ ಹೊರಗುಳಿಯದಂತೆ ಕ್ರಮವಹಿಸುವುದು
   (ii) ಯಾವುದೇ ಮಗುವಿಗೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ನೀಡುವಂತಿಲ್ಲ.
   (iii) ವಿದ್ಯಾರ್ಥಿಯ ವ್ಯಾಸಂಗ ಮುಗಿಯುವವರೆಗೂ ಮಗುವನ್ನು ಮಂಡಳಿ ನಡೆಸುವ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ಒತ್ತಡ ಹೇರುವಂತಿಲ್ಲ
   (iv) ವಿದ್ಯಾರ್ಥಿ ವ್ಯಾಸಂಗ ಮುಗಿಸಿದ ನಂತರ ಸೆಕ್ಷನ್ 30ರ ಅನ್ವಯ ಪ್ರಮಾಣ ಪತ್ರವನ್ನು ನೀಡುವುದು
   (v) ಕಾಯ್ದೆಯಲ್ಲಿ ಸೂಚಿಸದಂತೆ ವಿಶೇಷ ಅಗತ್ಯತೆಯುಳ್ಳ ವಿದ್ಯಾರ್ಥಿಗಳಿಗೆ ಅವರ ಅವಶ್ಯಕತೆಗಳನ್ನು ಪೂರೈಸುವುದು.
   (vi) ಆರ್ ಟಿ ಇ ನಿಯಮದನ್ವಯ ನಿಗದಿಪಡಿಸಿದ ವಿದ್ಯಾರ್ಹತೆಯುಳ್ಳ ಶಿಕ್ಷಕರನ್ನೇ ನೇಮಿಸಿಕೊಳ್ಳುವುದು.
   (vii) ರಾಜ್ಯ ಸರ್ಕಾರ ನಿಗದಿಪಡಿಸಿದ ವೇತನಕ್ಕನುಸಾರವಾಗಿಯೆ ವೇತನ ಮತ್ತು ಇತರೆ ಭತ್ಯೆಗಳನ್ನು ಬ್ಯಾಂಕ್ ಖಾತೆ ಮೂಲಕವೇ ಸಂದಾಯ ಮಾಡತಕ್ಕದ್ದು ಹಾಗು ಸೇವಾ ಭದ್ರತೆ ಒದಗಿಸತಕ್ಕದ್ದು.
   (viii) ಕಾಯ್ದೆ 24(1) ಮತ್ತು ಆರ್ ಟಿ ಇ ನಿಯಮ 16ರಂತೆ ಶಿಕ್ಷಕರು ತಮ್ಮ ಕರ್ತವ್ಯವನ್ನು ಪಾಲಿಸತಕ್ಕದ್ದು ಮತ್ತು ಯಾವುದೇ ರೀತಿಯ ಖಾಸಗಿ ಟ್ಯೂಷನ್ ನಡೆಸುವಂತಿಲ್ಲ ಹಾಗೂ ಸಂಭಾವನೆ ಪಡೆಯುವಂತಿಲ್ಲ.
10. ಶಾಲೆಯು ಯಾವ ಶೈಕ್ಷಣಿಕ ಮಾಧ್ಯಮದ ಅನುಮತಿ ಪಡೆದಿದೆಯೋ ಶಾಲೆಯೂ ಅದೇ ಪಠ್ಯಕ್ರಮ ಪುಸ್ತಕಗಳನ್ನು ಅನುಸರಿಸತಕ್ಕದ್ದು.
11. ಕಾಯ್ದೆ 19ರನ್ವಯ ವಿದ್ಯಾರ್ಥಿಗಳ ಸಂಖ್ಯೆಯ ಅನುಪಾತಕ್ಕೆ ಅನುಗುಣವಾಗಿ ಸೌಲಭ್ಯಗಳನ್ನು ಒದಗಿಸತಕ್ಕದ್ದು ಹಾಗು ಗುಣ ಮಟ್ಟ ಪಾಲಿಸುವುದು.
12. ಶಾಲೆಯ ಆವರಣದ ಒಳಗೆ / ಹೊರಗೆ ನಿಯಮಬಾಹಿರವಾಗಿ ತರಗತಿಗಳನ್ನು ನಡೆಸುವಂತಿಲ್ಲ
13. ಶಾಲಾ ಕಟ್ಟಡದ ಮತ್ತು ಇತರೆ ಭೌತಿಕ ಸೌಲಭ್ಯಗಳನ್ನು ಇತರೆ ವಾಣಿಜ್ಯ ಉದ್ದೇಶ, ರಾಜಕೀಯ, ಶಿಕ್ಷಣ ಬಾಹಿರ ಚಟುವಟಿಕೆಗಳಿಗೆ ಬಳಸಬಾರದು
14. **ಸಿಬ್ಬಂದಿಗೆ ಸೇವಾಭದ್ರತೆಯಡಿ ಕನಿಷ್ಠ ವೇತನ ನೀಡುವ ಷರತ್ತಿಗೊಳಪಟ್ಟು ಅನುದಾನರಹಿತವಾಗಿ ಮಾನ್ಯತೆ ನೀಡಿದೆ.**

ಉಪ ನಿರ್ದೇಶಕರು {ಆಡಳಿತ}
ಸಾ.ಶಿ.ಇ., ಶಿವಮೊಗ್ಗ

**ಗೆ,**

1} ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿವಮೊಗ್ಗ ತಾ

2} ಸಂಚಾಲಕರು/ಕಾರ್ಯದರ್ಶಿಗಳು, ಜ್ಞಾನಸಾಗರ ಎಜುಕೇಷನ್ ಟ್ರಸ್ಟ್ {ರಿ}, ಕೊಮ್ಮನಾಳು, ಶಿವಮೊಗ್ಗ ತಾ,

3} ಮುಖ್ಯ ಶಿಕ್ಷಕರು, ಜ್ಞಾನಸಾಗರ ಸೆಂಟ್ರಲ್ ಸ್ಕೂಲ್, {ಸಿ ಬಿ ಎಸ್ ಇ} ಕೊಮ್ಮನಾಳು, ಶಿವಮೊಗ್ಗ ತಾ, ಶಿವಮೊಗ್ಗ ತಾ,